ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ/ಪ್ಲಾನ್0/47/2021

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ
ಬೆಂಗಳೂರು-560001
ದಿ:02/11/2022

**:ಪ್ರಕಟಣೆ:**

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್-ಬಂಟ್ವಾಳ ಸಂಸ್ಥೆಯ ಗ್ರಂಥಾಲಯಕ್ಕೆ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಪುಸ್ತಕಗಳನ್ನು ಖರೀದಿಸಿ ಒದಗಿಸಲು ಪುಸ್ತಕಗಳ ಅಂದಾಜು ದರಪಟ್ಟಿಗಳನ್ನು ನೀಡುವ ಬಗ್ಗೆ.

**ಉಲ್ಲೇಖ:** 1.ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್-ಬಂಟ್ವಾಳ ಇವರ ಪತ್ರ ಸಂಖ್ಯೆ:ಜಿಪಿಟಿಬಿಎನ್/36/ಗ್ರಂಥಾಲಯ/(ಪು.ಬ)/202122/125 ದಿ:16/05/2022 ಮತ್ತು 14/09/2022

2. ಸಹಾಯಕ ಆಯುಕ್ತರು, ಮಂಗಳೂರು ಉಪವಿಭಾಗ, ಮಂಗಳೂರು ತಾಲ್ಲೂಕ್ ಆಡಳಿತ ಸೌಧ(ಕಂದಾಯ ಇಲಾಖೆ) ಇವರ ಪತ್ರ ಸಂಖ್ಯೆ: ACMNG/LADS/MLAS/2021-22/157326/A-12 di:17/01/20222

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(01) ರ ಪತ್ರದಲ್ಲಿ ಸರ್ಕಾರಿ ಪಾಲಿಟೆಕ್ನಿಕ್-ಬಂಟ್ವಾಳ ಸಂಸ್ಥೆಯ ಗ್ರಂಥಾಲಯಕ್ಕೆ ಪುಸ್ತಕಗಳ ಖರೀದಿಗೆ ರೂ.2021-22 ನೇ ಸಾಲಿನ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ರೂ.05 ಲಕ್ಷಗಳು ಮಂಜೂರಾಗಿದ್ದು ಉಲ್ಲೇಖ(2) ರಲ್ಲಿ ಅನುದಾನ ಪರೀಕ್ಷಣೆ ಮೇರೆಗೆ ಸದರಿ ಕಾಮಗಾರಿಯನ್ನು ಅನುಷ್ಠಾನ ಗೊಳಿಸುವ ಬಗ್ಗೆ ಅನುದಾನ ಬಿಡಿಗಡೆ ಕುರಿತು ಪ್ರಸ್ತಾವನೆಯನ್ನು ಸಲ್ಲಿಸುವಾಗ ಪೂರಕ ದಾಖಲೆಗಳು, ಕಾಮಗಾರಿ ಅನುಷ್ಠಾನದ ಬಗ್ಗೆ ಭಾವ ಚಿತ್ರಗಳು, ಸ್ವೀಕೃತಿ ಪತ್ರ, ಬಿಲ್ಲುಗಳನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ. ಈ ಸಂಬಂಧ ಸರ್ಕಾರಿ ಪಾಲಿಟೆಕ್ನಿಕ್-ಬಂಟ್ವಾಳ ಸಂಸ್ಥೆಯ ಗ್ರಂಥಾಲಯಕ್ಕೆ ಅಗತ್ಯವಾಗಿರುವ ಪುಸ್ತಕಗಳ ಸರಬರಾಜಿಗೆ ಅರ್ಹ (ಪಾಲಿಟೆಕ್ನಿಕ್ ಪಠ್ಯಕ್ರಮದ ಪುಸ್ತಕಗಳನ್ನು ಸಂಸ್ಥೆಗಳಿಗೆ ಸರಬರಾಜು ಮಾಡಿ ಅನುಭವವಿರುವ)ಸರಬರಾಜುದಾರರಿಂದ ಕೊಟೇಷನ್/ದರಪಟ್ಟಿಯನ್ನು ಕರೆಯಲಾಗಿದೆ. ಸದರಿ ಪುಸ್ತಕಗಳಿಗೆ ದರ ಮತ್ತು ನೀಡಲಾಗುವ ಸೋಡಿಯ ವಿವರಗಳೊಂದಿಗೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ ಬೆಂಗಳೂರು ಇವರ ಹೆಸರಿಗೆ ಕೊಟೇಷನ್ ಬರೆದು ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560001 ಇವರ ವಿಳಾಸಕ್ಕೆ ದಿ:16/11/2022 ರೊಳಗಾಗಿ ಕಳುಹಿಸಿ ಕೊಡಲು ಕೋರಲಾಗಿದೆ. ಲಕೋಟೆಯ ಮೇಲೆ ಸರ್ಕಾರಿ ಪಾಲಿಟೆಕ್ನಿಕ್-ಬಂಟ್ವಾಳ ಸಂಸ್ಥೆಯ ಗ್ರಂಥಾಲಯಕ್ಕೆ ಪುಸ್ತಕಗಳ ಸರಬರಾಜಿಗೆ ದರಪಟ್ಟಿ ಎಂದು ತಪ್ಪದೇ ನಮೂದಿಸುವುದು.

**<u>ದರಪಟ್ಟಿಯ ನಿಯಮ ನಿಬಂಧನೆಗಳು:-</u>**

- ಪತ್ರದೊಂದಿಗೆ ನೀಡಿರುವ ಎಲ್ಲಾ ಪುಸ್ತಕಗಳಿಗೂ ದರಗಳನ್ನು ನಮೂದಿಸುವುದು, ಪಟ್ಟಿಯಲ್ಲಿನ ಪುಸ್ತಕಗಳ ಹೆಸರು, ಪ್ರಕಾಶನ ಮತ್ತು ಲೇಖಕರ ಹೆಸರುಗಳನ್ನು ಬದಲಾಯಿಸುವಂತಿಲ್ಲ. ಎರಡಕ್ಕಿಂತ ಹೆಚ್ಚಿನ ಬಿಡ್‌ದಾರರಲ್ಲಿ ನಮೂದಿತ ದರಗಳು

ಒಂದೇ ಆಗಿದ್ದಲ್ಲಿ ಅತಿಹೆಚ್ಚು ಪುಸ್ತಕಗಳಿಗೆ ದರನಮೂದಿಸಿರುವ ಬಿಡ್‌ದಾರರನ್ನು ಎಲ್-1 ಬಿಡ್‌ದಾರರೆಂದು ಪರಿಗಣಿಸಲಾಗುವುದು.

- ಸರಬರಾಜುದಾರರು ಗುಡ್ ಆಫೀಸ್ ಸಮಿತಿಯ/ಕರ್ನಾಟಕ ಪುಸ್ತಕ ಮಾರಾಟಗಾರರ ಮತ್ತು ಡಿಸ್ಟ್ರಿಬ್ಯೂಟರ್‌ಗಳ ಅಸೋಸಿಯೇಷನ್ ಸದಸ್ಯರಾಗಿರಬೇಕು. ಪುಸ್ತಕಗಳ ಮೇಲೆ ನೀಡುವ ಸೋಡಿಯು ಗುಡ್ ಆಫೀಸ್ ಸಮಿತಿಯ ನಿಯಮಗಳ ಪ್ರಕಾರ ಇರುತ್ತದೆಂದು ಪ್ರಮಾಣೀಕರಿಸಬೇಕು.
- ಪುಸ್ತಕಗಳ ಸರಬರಾಜಿಗೆ ಸಂಬಂಧಿತ ಪಾವತಿಯು ಕಾಮಗಾರಿ ಪೂರ್ಣಗೊಂಡ ಬಳಿಕ ಸರಬರಾಜುದಾ ಸಹಾಯಕ ಆಯುಕ್ತರು, ಮಂಗಳೂರು ಉಪವಿಭಾಗ, ಮಂಗಳೂರು ತಾಲ್ಲೂಕ್ ಆಡಳಿತ ಸೌಧ(ಕಂದಾಯ ಇಲಾಖೆ) ಇವರಿಂದ ಸಂದಾಯವಾಗುವುದು.
- ಪುಸ್ತಕಗಳ ಸರಬರಾಜು ಸರ್ಕಾರಿ ಪಾಲಿಟೆಕ್ನಿಕ್ –ಬಂಟ್ವಾಳ ಸಂಸ್ಥೆಗೆ ಮಾಡತಕ್ಕದ್ದು.
- ದರ ನಮೂದಿಸಿ ಸರಬರಾಜಿಗೆ ಆದೇಶ ಪಡೆದ ಪುಸ್ತಕಗಳನ್ನು ಕಡ್ಡಾಯವಾಗಿ ಸರಬರಾಜು ಮಾಡತಕ್ಕದ್ದು.
- ಸರಬರಾಜುದಾರರು ಪಾಲಿಟೆಕ್ನಿಕ್ ಪಠ್ಯಕ್ರಮದ ಪುಸ್ತಕಗಳನ್ನು ಸಂಸ್ಥೆಗಳಿಗೆ ಸರಬರಾಜು ಮಾಡಿ ಅನುಭವವಿರುವ ಬಗ್ಗೆ ದಾಖಲೆಗಳನ್ನು ಒದಗಿಸತಕ್ಕದ್ದು.

8/11/22

ಜಂಟಿನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ

ಪ್ರತಿ: ಇ-ಆಡಳಿತ ವಿಭಾಗ, ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು